**ಪಿ. ಸಿ. ನಂ. 41-2025.**

**ದಿನಾಂಕಃ 07-04-2025 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು .**

ನಾನು ನನ್ನ ಪ್ರಮಾಣೀಕೃತ ಹೇಳಿಕೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಅಂಶಗಳು ಸತ್ಯವಾಗಿದೆ. ಅದನ್ನು ನಾನೇ ನಮ್ಮ ವಕೀಲರಿಗೆ ಹೇಳಿ ಬರೆಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಾಗಿರುತ್ತದೆ. ನಾನು ಈ ಕೆಳಕಂಡ ದಾಖಲಾತಿಗಳನ್ನು ಹಾಜರುಪಡಿಸುತ್ತಿದ್ದೇನೆ. ಅವುಗಳಲ್ಲಿ ಈ ಕೆಳಕಂಡಂತೆ ಇವೆ.

1. ಆರೋಪಿ ನೀಡಿರುವ ಚೆಕ್ಕನ್ನು ನಿ. ಪಿ. 1 ಎಂದು, ಅದರಲ್ಲಿರುವ ಆರೋಪಿಯ ಸಹಿಯನ್ನು ನಿಪಿ 1 ಎ ಎಂದು,

2. ಬ್ಯಾಂಕಿನ ಹಿಂಬರಹವನ್ನು ನಿಪಿ. 2 ಎಂದು,

3. ನೋಟೀಸನ್ನು ನಿಪಿ 3 ಎಂದು,

4. ಅಂಚೆ ಸ್ವೀಕೃತಿಯನ್ನು ನಿಪಿ 4 ಎಂದು ಗುರುತಿಸಲಾಯಿತು.

5. ಸಾಲದ ಖಾತಾ ನಕಲನ್ನು ನಿಪಿ 5 ಎಂದು

6 . ಅಧಿಕಾರ ಪತ್ರವನ್ನು ನಿಪಿ 6 ಎಂದು,

7. ಸಾಲದ ಕರಾರು ಪತ್ರವನ್ನು ನಿಪಿ 7 ಎಂದು ಗುರುತಿಸಲಾಯಿತು.

ಸಾಕ್ಷಿಯು ಸಾಲದ ಕರಾರು ಪತ್ರವು ಬ್ಯಾಂಕನ ವ್ಯವಹಾರಕ್ಕೆ ಅವಶ್ಯಕತೆ ಇರುವ ಕಾರಣ ಹಾಜರುಪಡಿಸಿರುವ ನೋಟರಿ ಪ್ರತಿಯನ್ನು ಮೂಲ ಪ್ರತಿಗೆ ತುಲನೆ ಮಾಡಿ ನೋಡಿ ಸರಿ ಇರುವ ಕಾರಣ ನೋಟರಿ ಪ್ರತಿಗಳನ್ನು ನಿಪಿ. 7(ಎ) ಎಂದು ಗುರುತಿಸಿ ಮೂಲ ಪ್ರತಿಗಳನ್ನು ಸಾಕ್ಷಿಗೆ ವಾಪಸ್ ನೀಡಲಾಯಿತು.

ಆದ್ದರಿಂದ ಆರೋಪಿ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ .

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಯಿತು)

ಓ.ಹೇ.ಕೇ. ಸರಿ ಇದೆ

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ ದಂ., ದಾಂಡೇಲಿ